# ಬಡತನದಿಂದ ಹಿರಿತನಕ್ಕೆ

ಕೆ.ವಿ. ಸ್ವರ್ಣಗೌರಿ

**ಸ್ವಾಮಿ ವಿವೇಕಾನಂದರು** 'ಯಾರು ಪರರಿಗಾಗಿ ಜೀವಿಸುವರೋ ಅವರು ಮಾತ್ರವೇ ಬದುಕಿರುವರು; ಉಳಿದವರೆಲ್ಲಾ ಸತ್ತಂತೆಯೇ' ಎನ್ನುತ್ತಾರೆ. ಪುಟ್ಟೀರಮ್ಮ ಎಂದರೆ ನೊಂದ ಮಕ್ಕಳ ಜೀವಕ್ಕೆ ಚೈತನ್ಯ ತುಂಬುತ್ತಿರುವ, 'ತಾಯಿ' 'ಸೇವಾಮಾತಾ' 'ಮಹಾಮಾತೆ' 'ಮಹಾತಾಯಿ' ಎಂದೆಲ್ಲಾ ಬಿರುದುಬಾವಲಿಗಳಿಂದ ಸಾಲಂಕೃತಳಾದ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬಂದ ಓರ್ವ ಭಾರತಾಂಬೆಯ ಅವಿದ್ಯಾವಂತ ಸುಪುತ್ರಿ. ಇವರ ನಿಃಸ್ವಾರ್ಥ ಸೇವೆಯನ್ನು ಗುರುತಿಸಿ ೧೯೯೮ರಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನದಂದು ಭಾರತ ಸರ್ಕಾರವು 'ರಾಜೀವ್ ಗಾಂಧಿ ಮಾನವ ಸೇವಾ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇದು ಕರ್ನಾಟಕಕ್ಕೆ ಸಂದ ಕೀರ್ತಿ ಅಲ್ಲವೇ?

> ಜೀವನದ ಕಷ್ಟಸಂಕಟಗಳು ಅನೇಕರನ್ನು ಕುಗ್ಗಿಸಿ ಹತಾಶರನ್ನಾಗಿ ಮಾಡಿಬಿಡುತ್ತವೆ. ಆದರೆ ಆ ಕಷ್ಟಸಂಕಟಗಳಿಂದಲೇ ಹಿರಿಮೆಗೆ ಏರಿದ ಕೆಲವರು ಅಪೂರ್ವ ವ್ಯಕ್ತಿಗಳಿರುತ್ತಾರೆ. ಅಂತಹ ವ್ಯಕ್ತಿಯೊಬ್ಬರ ಜೀವನ ಪರಿಚಯ ಈ ಲೇಖನದಲ್ಲಿದೆ. ಕುಮಾರಿ ಸ್ವರ್ಣಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು.

೧೯೧೬ನೇ ಇಸವಿಯಲ್ಲಿ ತಾಯಿ ಮಂಚಮ್ಮ ಎಂಟು ತಿಂಗಳ ಗರ್ಭವತಿಯಾಗಿರುವಾಗಲೇ ತಂದೆ ಕೆಂಚೇಗೌಡರು ತೀರಿಹೋದ ಕಾರಣ ಭೂಮಿಗೆ ಬರುವ ಮುನ್ನವೇ ತಂದೆಯನ್ನು ನುಂಗಿದ ನತದೃಷ್ಟೆ ಎಂಬ ಮೂದಲಿಕೆಯನ್ನು ಹೊತ್ತು ಜನಿಸಿದ್ದರು ಈ ಪ್ರಶಸ್ತಿಯ ಪುತ್ರಿ! ಮದುವೆಯಾದ ಐದು ವರ್ಷಗಳಲ್ಲೇ ಎರಡು ಗಂಡು ಹಾಗೂ ಒಂದು ಹೆಣ್ಣು ಶಿಶುವಿಗೆ ಜನ್ಮವಿತ್ತ ಮಂಚಮ್ಮನ ಸಂಸಾರ ಬೀದಿಪಾಲಾಯಿತು. ಆಸ್ತಿಗೋಸ್ಕರ ನೆಂಟರು ಹೂಡಿದ ವ್ಯಾಜ್ಯದಲ್ಲಿ ಕೋರ್ಟಿನ ತೀರ್ಪು ಇವರಿಗೆ ವಿರುದ್ಧವಾಗಿ ಇಬ್ಬರು ಗಂಡುಮಕ್ಕಳು ನೆಂಟರ ವಶವಾದರು. ಹೊಲ, ದನಕರು, ಜಮೀನು ಎಲ್ಲವೂ ಹೋದನಂತರ ತಾನಿಲ್ಲಿರುವುದು ಸರಿಯಲ್ಲವೆಂದೆಣಿಸಿ ತಾಯಿ ಮಂಚಮ್ಮ ಕೂಲಿಯ ಜೀವನ ನಡೆಸಲು ಪಾಂಡವಪುರ ತಾಲ್ಲೂಕಿನ ಕಸವೆ ಹೋಬಳಿಯನ್ನು ಬಿಟ್ಟು ಮೈಸೂರು ಪಟ್ಟಣ ಸೇರಿದಳು. ನೀನೇ ಎನ್ನುವವರಿಲ್ಲದೆ ಅನಾಥಳಾದ ಈ ಶಿಶುವನ್ನು ಸಾಕಲು ಅಜ್ಜಿಯೇ ಮುಂದೇ ಬಂದಳು. ಆದರೆ ಅಲ್ಲಿಯೂ ಈ ಅನಿಷ್ಟ ಶಿಶುವನ್ನು ಕರೆತಂದ ಕಾರಣ ಜಗಳವೋ ಜಗಳ. ಮಗುವನ್ನು ಆದರಿಸುವವರೇ ಇಲ್ಲವಾದರು. ಪ್ರೀತಿ, ಆದರಗಳೆಂದರೆ ಏನೆಂದು ಅರಿಯದೆ ಬೆಳೆಯಿತು. ವಿಧಿಯ ವಿಡಂಬನೆ ಇಲ್ಲಿಗೇ ಮುಗಿದಂತೆ ಇರಲಿಲ್ಲ. ಅಜ್ಜಿಯ ಮನೆಗೆ ಬಂದ ಐದು ವರ್ಷಗಳಲ್ಲೇ ಅಜ್ಜಿ ಹಾಗು ಚಿಕ್ಕಮ್ಮ ಇಬ್ಬರೂ ತೀರಿಕೊಂಡರು. ಮೈಸೂರಿನಲ್ಲಿ ವಾಸಿಸುವ ತಾಯಿಯ ಮನೆ ಸೇರಿದ ಈ ಐದು ವರ್ಷದ ಬಾಲಕಿ ಎರಡಾಣೆ ಕೂಲಿಗೋಸ್ಕರ ಗಾರೆ ಕೆಲಸಕ್ಕೆ ಹೊರಟು ನಿಂತಳು ತಾಯಿಯೊಡನೆ! ಈ ಬಾಲಕಿಯ ಸತ್ವಪರೀಕ್ಷೆಯನ್ನು ಮಾಡಲೇಬೇಕೆಂದು ಆ ದೈವವು ತೀರ್ಮಾನಿಸಿದಂತೆ ಕಾಣುತ್ತದೆ. ಹತ್ತು ವರ್ಷ ವಯಸ್ಸಿನವಳಾಗಿದ್ದಾಗ ಒಮ್ಮೆ ಇಟ್ಟಿಗೆ ಹೊರುತ್ತಿರುವಾಗ ತಾರಸಿಯೆ ಕಾಲ ಮೇಲೆ ಬಿದ್ದು ಕಾಲು ಮುರಿದು ಮೂರು ತಿಂಗಳು ಆಸ್ಪತ್ರೆ ಸೇರಬೇಕಾಯಿತು. ಆಸ್ಪತ್ರೆಯಿಂದ ಹಿಂತಿರುಗಿದ ನಂತರ ಯಥಾಪ್ರಕಾರ ಗಾರೆಯ ಕೆಲಸ ಆರಂಭ. ಶಾಲೆಗೆ ಹೋಗಿ ಆಟ, ಪಾಠಗಳಲ್ಲಿ ಸ್ನೇಹಿತೆಯರೊಡಗೂಡಿ ಆನಂದಿಸುವ ಆ ಸೌಭಾಗ್ಯವು ಇವರ ಪಾಲಿಗೆ ಶೂನ್ಯ. ಪ್ರಾಪಂಚಿಕ ಸುಖೋಪಭೋಗಗಳ ಮಾತಿರಲಿ ಎರಡು ಹೊತ್ತು ಪೌಷ್ಟಿಕ ಆಹಾರಕ್ಕೂ ಬರಗಾಲ!

ಜೀವನ ಎಂದರೆ ಏನೆಂದು ಅರಿಯದ ಈ ಪುಟ್ಟ ಬಾಲಕಿಯು ಹೀಗೆ ಬೆಳೆಯುತ್ತಾ ಹದಿನೈದನೆ ವಯಸ್ಸಿಗೆ ಕಾಲಿಟ್ಟಿತು. ಇನ್ನೂ ದೇಹ, ಬುದ್ಧಿ, ಮನಸ್ಸು ಬೆಳೆಯುವ ಮುನ್ನವೇ ತಾಯಿ ಮದುವೆ ಎಂಬ ಶಾಸ್ತ್ರ ಮುಗಿಸಿದಳು. ಈಗಲಾದರೂ ಆಕೆಯ ಜೀವನ ಸುಗಮವಾದೀತೆನೋ ಎಂಬ

"ಜೀವನಕ್ಕೆ ಒಂದು ಅರ್ಥವಿರುವುದಾದರೆ ಕಷ್ಟಪರಂಪರೆಗಳಿಗೂ ಒಂದು ಅರ್ಥವಿರುತ್ತದೆ. ದುಃಖ ಜೀವನದ ಅವಿಭಾಜ್ಯ ಅಂಗ—ಅದೃಷ್ಟ ಮತ್ತು ಸಾವುಗಳಿದ್ದಂತೆ. ದುಃಖ ಮತ್ತು ಸಾವುಗಳನ್ನು ಹೊರತುಪಡಿಸಿದರೆ ಮಾನವ ಜೀವನ ಅಸಂಪೂರ್ಣವಾಗಿ ಉಳಿಯುತ್ತದೆ."

—ವಿಕ್ಟರ್ ಇ. ಫ್ರಾಂಕ್ಲ್, ಪ್ರಸಿದ್ಧ ಮನಶ್ಶಾಸ್ತ್ರಜ್ಞ.

ಆಸೆ ಆ ತಾಯಿಗೆ! ಆದರೆ ತಾನೊಂದು ಎಣಿಸಿದರೆ ದೈವ ಇನ್ನೊಂದು ಬಗೆಯುವುದು. ಒಂದು ವರ್ಷ ವೈವಾಹಿಕ ಜೀವನದ ಕಹಿಯನ್ನು ಉಂಡು ವಿಚ್ಛೇದನ ಪಡೆದು ಮರಳಿ ಗೂಡನ್ನು ಸೇರಿದಳು. ಕೂಲಿ ಕೆಲಸ, ಅವರಿವರ ಮನೆಗೆಲಸ ಮಾಡಿ ಹೊಟ್ಟೆ ಹೊರೆಯುವುದೇ ಇವರ ಪಾಲಿಗೆ ಕಟ್ಟಿಟ್ಟ ಬುತ್ತಿಯಾಯಿತು. 'ಅಣ್ಣ ನಮ್ಮವನಾದರೂ ಅತ್ತಿಗೆ ನಮ್ಮವಳೇ?' ಎಂಬ ಗಾದೆ ಮಾತಿನಂತೆ, ಅಣ್ಣನ ಮದುವೆಯಾದ ನಂತರ ಅತ್ತ ಗಂಡನ ಮನೆಯ ಆಶ್ರಯವೂ ಇಲ್ಲದೆ, ಇತ್ತ ತವರಿನ ಮನೆಯೂ ತಪ್ಪಿ ತ್ರಿಶಂಕು ಸ್ಥಿತಿ. 'ತಿನ್ನಲು ಅನ್ನವಿಲ್ಲದೆ, ಮಲಗಲು ಜಾಗವಿಲ್ಲದೆ, ಮಾಡಬಾರದ ಕೆಲಸಗಳನ್ನೆಲ್ಲಾ ಮಾಡಿ ಅಂತರ್ ಪಿಶಾಚಿಯಂತೆ ಜೀವನ ನಡೆಸಿ ಸೋತುಹೋದೆ.' ಎನ್ನುತ್ತಾರೆ. ಆದರೆ ಕಾರ್ಮುಗಿಲಿನಲ್ಲೂ ಅಲ್ಲೊಂದು ಇಲ್ಲೊಂದು ಮಿಂಚು ಮೂಡುತ್ತದೆ. ಹಾಗೆಯೇ ಇಪ್ಪತ್ತೈದು ವಯಸ್ಸಿನಲ್ಲಿ ಮೈಸೂರಿನ ಸುಪ್ರಸಿದ್ಧ ರೇಷ್ಮೆ ಕಾರ್ಖಾನೆಯಲ್ಲಿ ದಿನಕ್ಕೆ ನಾಲ್ಕಾಣೆಯ ಕೂಲಿ ಕೆಲಸ ದೊರೆಯಿತು. ತಾಯಿಮಗಳಿಬ್ಬರೂ ಮೃಗಶಾಲೆಯ ಬಳಿ ಒಂದು ಕೋಣೆಯನ್ನು ಬಾಡಿಗೆಗೆ ಕೊಂಡರು. ಕಿಂಚಿತ್ತು ಜೀವನ ಸುಗಮವಾಯಿತೇನೋ ಎನ್ನುವಷ್ಟರೊಳಗೆ ಇನ್ನೊಂದು ಬರಸಿಡಿಲು ಎರಗಿತು. ಈ ಪ್ರಪಂಚದಲ್ಲಿ ಇದ್ದ ಒಂದೇ ಒಂದು ಆಸರೆ ಆ ತಾಯಿ ಮಂಚಮ್ಮ ಕಾಲವಶಳಾದಳು. ಮತ್ತೆ ಒಂಟಿ ಜೀವನ ಪ್ರಾರಂಭವಾಯಿತು ಹಾಗೂ ಪುಂಡು ಪೋಕರಿಗಳ ಹಾವಳಿಯೂ ಕೂಡ.

"ನಮ್ಮ ಕಣ್ಣೆದುರಿಗೆ ಒಂದು ಪ್ರಪಂಚವಿದೆ, ಅದು ಅತ್ಯಂತ ದುಃಖಮಯವಾಗಿದೆ. ಬುದ್ಧನಂತೆ, ಅದರಲ್ಲಿ ಪ್ರವೇಶಿಸಿ, ಅದರ ದುಃಖವನ್ನು ಕಡಮೆ ಮಾಡಲು ಪ್ರಯತ್ನಪಡಿ. ಇಲ್ಲವಾದರೆ ಅಂಥ ಪ್ರಯತ್ನದಲ್ಲಿ ನಿಮ್ಮ ಪ್ರಾಣವನ್ನೇ ಬಿಡಿ"

—ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರು 'ಮನುಷ್ಯನ ಶೀಲ ನಿರ್ಮಾಣದಲ್ಲಿ ಸುಖ, ದುಃಖ ಎರಡೂ ಸಮಾನ ಪಾತ್ರ ವಹಿಸುವುವು. ಆದರೆ ಚರಿತ್ರೆಯನ್ನು ನೋಡಿದರೆ ಹೆಚ್ಚಿನ ಅಂಶ ಸುಖಕ್ಕಿಂತ ದುಃಖವೇ, ಶ್ರೀಮಂತಿಕೆಗಿಂತ ಬಡತನವೇ ಹಾಗೂ ಹೊಗಳಿಕೆಗಿಂತ ಹೊಡೆತಗಳೇ ಶೀಲವನ್ನು ನಿರ್ಮಾಣ ಮಾಡಿದೆ' ಎನ್ನುತ್ತಾರೆ. ಈ ದುರಂತ ಜೀವನವು ಪುಟ್ಟೀರಮ್ಮನವರಲ್ಲಿ '**ಆಧ್ಯಾತ್ಮಿಕ ಅಭಿರುಚಿ**'ಯನ್ನು ಮೂಡಿಸಿತು. ವಿಧಿಯೊಡ್ಡಿದ ಪರೀಕ್ಷೆಗಳಿಗೆಲ್ಲಾ ಸವಾಲಾಗಿ ನಿಂತರು. ಆಂಧ್ರ ಪ್ರದೇಶದ ಗುಂತಕಲ್ಲಿನ ಚಳ್ಳಬುರಕಿಯ ಹಿರೇತಾತ ಎಂಬುವರ ಬಳಿ ದೀಕ್ಷೆಯನ್ನು ತೆಗೆದುಕೊಂಡರು. ಇನ್ನುಳಿದ ಜೀವಿತದ ಭಾಗವನ್ನು ದೇವರಿಗೆ ಅರ್ಪಿಸುವುದೆಂದು ತೀರ್ಮಾನಿಸಿ ತೀರ್ಥ ಕ್ಷೇತ್ರಗಳ ದರ್ಶನ, ಸತ್ಸಂಗ, ಸಾಧುಸೇವೆ, ಮಹಾತ್ಮರ ದರ್ಶನ ಮಾಡುತ್ತಾ ಕಾಲಯಾಪನೆ ಮಾಡತೊಡಗಿದರು. 'ನಿಂದನೆ, ವಂದನೆಗಳಿಗೆಲ್ಲಾ ಈಡಾಗಿ, ನೀನೇ ಎನ್ನುವವರಿಲ್ಲದೆ, ಒಂಟಿ ಜೀವನ ಸಾಗಿಸಿ ಸಾಕು ಈ ಜನ್ಮ ಎಂದೆನಿಸಿ, ದೇವರೊಬ್ಬನೇ ಇರುವವನು ಎಂದು ನಂಬಿ ಬದುಕು ನಡೆಸಿದೆ' ಎನ್ನುತ್ತಾರೆ ಆ ಕಷ್ಟದ ದಿನಗಳನ್ನು ನೆನೆಯುತ್ತಾ.

೧೯೬೬ನೆ ಇಸವಿಯಲ್ಲಿ ತಾವು ಜನಿಸಿದ ಪಾಂಡವಪುರದಲ್ಲಿ ಒಂದು ರಾಮಮಂದಿರ ಸ್ಥಾಪಿಸಿ ಎರಡು ಬಡ ಮಕ್ಕಳ ಕಲ್ಯಾಣವನ್ನೂ ಮಾಡಿದರು. ೧೯೭೩ರಲ್ಲಿ ಸರಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಬಂದ ಹಣದಲ್ಲಿ ಒಂದು 'ವಿಶ್ವಸ್ಥ ಆಶ್ರಮ' ಸ್ಥಾಪಿಸಿ, ದಿಕ್ಕಿಲ್ಲದ ಕಿವುಡ ಹಾಗೂ ಮೂಕ ಹೆಣ್ಣು ಮಕ್ಕಳಿಗೆ ಮತ್ತು ವಿಧವೆಯರಿಗೆ ಆಶ್ರಯ ನೀಡಿ ಅವರ ಬದುಕಿಗೆ ದಾರಿ ದೀಪವಾಗಿದ್ದಾರೆ. 'ಕಿವುಡ ಹಾಗು ಮೂಕರನ್ನೇ ಏಕೆ ಆರಿಸಿಕೊಳ್ಳುವಿರಿ?' ಎಂದು ಈ ಲೇಖಕಿಯು ಕೇಳಿದಾಗ, 'ಎಲ್ಲವೂ ಚೆನ್ನಾಗಿರುವವರನ್ನು ಯಾರಾದರೂ ನೋಡಿಕೊಳ್ಳುವರು. ಇಂತಹವರನ್ನು ಯಾರು ನೋಡಿಕೊಳ್ಳುತ್ತಾರೆ?' ಎಂದು ವಾಸ್ತವತೆಯ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ. ಬದುಕಿನಲ್ಲಿ ಸಾಕಷ್ಟು ದುಃಖ ಅನುಭವಿಸಿದ್ದರೂ ಧೃತಿಗೆಡದೆ ತನ್ನಂತೆಯೇ ಗ್ರಾಮಾಂತರ ಪ್ರದೇಶದಿಂದ ಬಂದ ಅನಾಥರ ಶ್ರೇಯೋಭಿವೃದ್ಧಿಗಾಗಿ ಈ ಇಳಿ ವಯಸ್ಸಿನಲ್ಲೂ ತಮ್ಮ ಜೀವನ ಸಮರ್ಪಿಸಿದ್ದಾರೆ. ಪ್ರಶಸ್ತಿಗಳ ಬಗ್ಗೆ ಅಷ್ಟಾಗಿ ಒಲವು ತೋರದ ಪುಟ್ಟೀರಮ್ಮ, ಪ್ರಶಸ್ತಿಯ ಹಣವನ್ನು ಮಕ್ಕಳ ಕ್ಷೇಮಕ್ಕಾಗಿ ತೊಡಗಿಸಿದ್ದಾರೆ.

೧೯೮೭ರಲ್ಲಿ ಹತ್ತು ಮಕ್ಕಳಿಂದ ಪ್ರಾರಂಭವಾದ ಈ ಸಂಸ್ಥೆಯು ಈಗ ೭೦ ಜನ ಮಕ್ಕಳಿಗೆ ಆಶ್ರಯವನ್ನು ನೀಡಿದೆ. ಇಲ್ಲಿಯವರೆಗೆ ನಲ್ವತ್ತು ಮಂದಿ ಹೆಣ್ಣುಮಕ್ಕಳು ಏಳನೆ ತರಗತಿಯವರೆಗೆ ಓದಿ ಬೇರೆಡೆ ಹೋಗಿದ್ದಾರೆ. ಏಳನೇ ತರಗತಿಯವರೆಗೆ ಓದಿದ ನಂತರ ಮಕ್ಕಳ ಮುಂದಿನ ಭವಿಷ್ಯವೇನು? ಇದು ಆಕೆಯ ಚಿಂತೆಗೆ ಕಾರಣ. ಅವರ ಭವಿಷ್ಯಕ್ಕೆ ಏನಾದರೂ ದಾರಿ ಮಾಡಲು ಹಣದ ಅಡಚಣೆ. ವಿದ್ಯಾರಣ್ಯಪುರಂನಲ್ಲಿ ಈಗಿರುವ ಕಟ್ಟಡ ಹಾಗೂ ಇಲವಾಲದಲ್ಲಿ ಒಂದು ೪೦ x ೬೦ ಸೈಟು ಬಿಟ್ಟರೆ ಬೇರೆ ಚಿರಾಸ್ತಿಯಿಲ್ಲ. ಮನೆ ಮತ್ತು ಕಛೇರಿಯ ಕೆಲಸ ಮಾಡುವವರು, ಉಪಾಧ್ಯಾಯರು ಎಲ್ಲರೂ ಸೇರಿ ಒಟ್ಟು ಹನ್ನೆರಡು ಜನ ಇವರ ಈ ಕಾರ್ಯದಲ್ಲಿ ಸಹಾಯ ಮಾಡುತ್ತಿದ್ದಾರೆ.

'ನಿಮ್ಮ ಜೀವನದ ಒಂದೆರೆಡು ರೋಚಕವಾದ ಘಟನೆಗಳನ್ನು ಹೇಳಿ' ಎಂದು ಕೇಳಿದಾಗ ಆಕೆಯು ನಗುತ್ತಾ, 'ಅಯ್ಯೋ, ಒಂದೇ ಎರಡೇ ಘಟನೆಗಳು! ಎಲ್ಲವೂ ಬಂದವು.

ಹೋದವು. ಛೀ ಎಂದವರು ನನ್ನವರೇ; ಬಾ ಎಂದವರು ನನ್ನವರೇ. ಆದರೆ ನನ್ನ ಪ್ರಾರಬ್ಧಕ್ಕೆ ಯಾರೂ ಹೊಣೆಯಲ್ಲ. ನಾನೇ ಅನುಭವಿಸಬೇಕು' ಎಂದರು ಆ ನಿರ್ವಿಕಾರಿ. ಈಗ ವಯಸ್ಸಾಗಿ ದೇಹದ ಶಕ್ತಿಯೆಲ್ಲಾ ಕುಂದಿಹೋಗಿದ್ದರೂ ಮಕ್ಕಳೆಲ್ಲರ ಊಟವಾಗದ ಹೊರತು ತಾವು ಊಟ ಮಾಡುವುದಿಲ್ಲ. ಮಕ್ಕಳೆಲ್ಲರ ಮೇಲೆ ಅಜ್ಜಿಯ ಪ್ರೀತ್ಯಾದರಗಳನ್ನು ಹೊರಸೂಸುತ್ತದೆ ಆ ಮುಗ್ಧ ಸರಳ ಮುಖ. ಪ್ರಶಸ್ತಿಗಳ ಸುರಿಮಳೆಯು ಆಕೆಯ ಮನಸ್ಸನ್ನೇನಾದರೂ ವಿಚಲಿತಗೊಳಿಸಿತೆ? ಆ ಹಳ್ಳಿಯ ಅವಿದ್ಯಾವಂತ ಮಮತಾಮಯಿಯು ತನ್ನದೇ ಆದ ಭಾಷೆಯಲ್ಲಿ ಹೀಗೆನ್ನುತ್ತಾರೆ: 'ಕೋರಿಯಾಗಿರುವಾಗ ಊರೆಲ್ಲಾ ನೆಂಟರು. ಕೋಲೂರಿ ನಡೆವಾಗ ಯಾವೂರ ಮುದುಕಿ? ಇವೆಲ್ಲಾ ಬಂದವು ಎಂದು ಸಂತೋಷವೂ ಇಲ್ಲ, ಬರಲಿಲ್ಲವೆಂದು ಚಿಂತೆಯೂ ಇಲ್ಲ. ಎರಡೂ ಸಮಾನ.' ಕರ್ಮ ಮಾಡುತ್ತಾ ಮಾಡುತ್ತಾ ಸಂನ್ಯಾಸದ ಸ್ಥಿತಿಯನ್ನು ತಲುಪಿದ ಈಕೆಯನ್ನು ಅವಿದ್ಯಾವಂತರ ಗುಂಪಿಗೆ ಸೇರಿಸಲಾಗುವುದೇ? ನತದೃಷ್ಟೆ ಎಂಬ ಮೂದಲಿಕೆಯನ್ನು ಹೊತ್ತು ಜನಿಸಿದ ಆ ಶಿಶುವು ಇಂದು ಮಹಾನ್ ಆಧ್ಯಾತ್ಮಿಕ ಸತ್ಯತೆಗಳ ಸಾಕಾರಮೂರ್ತಿಯಾಗಿದ್ದಾರೆ. ಶಿಲ್ಪಿಯು ಕೊಟ್ಟ ಸಾವಿರ ಪೆಟ್ಟುಗಳಿಂದಲ್ಲವೇ ಒಂದು ಸುಂದರ ಮೂರ್ತಿಯು ರೂಪುಗೊಳ್ಳುವುದು?

ವಿಳಾಸ:
ಶ್ರೀಮತಿ ಪುಟ್ಟವೀರಮ್ಮನವರ ಆಶ್ರಮ ಟ್ರಸ್ಟ್ (ರಿ.)
ನಂ.೩೦೮, ವಿದ್ಯಾರಣ್ಯಪುರಂ, ವಿಶ್ವೇಶ್ವರ ನಗರ,
ಮೈಸೂರು ೫೭೦ ೦೦೮, ದೂರವಾಣಿ: ೪೮೯೭೮೫

## ಸ್ವಾಮಿ ವಿವೇಕಾನಂದ :

# ಶಕ್ತಿಯ ಸಂಕೇತ

ಡಾ. ಕೆ. ಎಸ್. ಭಗವಾನ್

ಯುಗಪುರುಷರು

ವಿವೇಕಾನಂದರ ಪ್ರಖರವಾದ ವ್ಯಕ್ತಿತ್ವ ಮತ್ತು ಸಂದೇಶವನ್ನು ಅಷ್ಟೇ ಪ್ರಖರವಾದ ಭಾಷೆಯಲ್ಲಿ ಚಿತ್ರಿಸಿದರೆ ಅದರ ಪರಿಣಾಮ ಅಪೂರ್ವವಾದುದು. ಈ ಲೇಖನ ಓದುವಾಗ ಅಂತಹ ಅನುಭವವಾಗುತ್ತದೆ. ಡಾ.ಕೆ.ಎಸ್ ಭಗವಾನ್ ಅವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿದ್ದಾರೆ.

ಇಪ್ಪತ್ತನೆಯ ಶತಮಾನ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಯುಗ. ಈ ಇಬ್ಬರು ಮಹಾಪುರುಷರು ಉಂಟುಮಾಡಿದ ಜಾಗೃತಿ ಇತಿಹಾಸ ಕಂಡಿರುವ ಎಲ್ಲಾ ಧಾರ್ಮಿಕ ಚಳುವಳಿಗಿಂತ ಹೆಚ್ಚು ಪ್ರಕಾಶಮಾನವಾಗಿದೆ. ಧರ್ಮ ಸಮನ್ವಯದ ವಿಚಾರ ಜನರಿಗೆ ಮೊದಲು ಅಲ್ಲೊಮ್ಮೆ ಇಲ್ಲೊಮ್ಮೆ ಅಧ್ಯಯನ ಮಟ್ಟದಲ್ಲಿ ಕಂಡರೂ ಕಾಣದಂತೆ ಸೂಕ್ಷ್ಮವಾಗಿ ಸೂಚಿತವಾಗಿತ್ತು. ಅದು ಪರಮಹಂಸರ ಜೀವನದಲ್ಲಿ ಸಂಪೂರ್ಣ ಸಾಕ್ಷಾತ್ಕಾರ ಪಡೆಯಿತು. ಎಲ್ಲಾ ಧರ್ಮಗಳೂ ಒಂದೇ 'ಧರ್ಮ' ದ ಬೇರೆ ಬೇರೆ ಶಾಖೆಗಳು; ಮನುಷ್ಯರೆಲ್ಲ ಒಂದೇ, ಪ್ರತ್ಯೇಕತೆ ವಿನಾಶಕಾರಿ; ಜಲ, ಪಾನಿ, ವಾಟರ್, ನೀರು ಎಂದು ವಿಧ ವಿಧವಾಗಿ ಹೆಸರಿಸಿದರೂ ವಸ್ತು ಒಂದೇ, ಎಂಬ ಪರಮಸತ್ಯವನ್ನು ಸಾಧನೆಯಿಂದ ಕಂಡುಕೊಂಡ ಅಪೂರ್ವ ಜ್ಯೋತಿಪುರುಷ ಶ್ರೀರಾಮಕೃಷ್ಣ ಪರಮಹಂಸರು. ಒಂದು ಕುಗ್ರಾಮದ ಓದಲೂ ಬರೆಯಲೂ ಬಾರದ ಬಡ ಹುಡುಗ ಮಾನವ ಜನಾಂಗದ ಗುರುಸ್ಥಾನಕ್ಕೆ ಬೆಳೆದದ್ದು ಅತ್ಯಂತ ರೋಮಾಂಚಕಾರಿಯಾದ ಅದ್ಭುತ ಕಥೆ. ತಾವು ಕಂಡ ಮಹಾ ದರ್ಶನವನ್ನು ಜಗತ್ತಿಗೆ ಬಿತ್ತಲು ಆಶಿಷ್ಠರೂ ಬಲಿಷ್ಠರೂ ದೃಢಿಷ್ಠರೂ ಧೀರಮತಿಗಳೂ ಅಂತಃಕರಣ ಸಂಪನ್ನರೂ ಆದ ತರುಣರ ತಂಡವನ್ನು ವಿಶೇಷ ಎಚ್ಚರಿಕೆಯಿಂದ ಅವರು ಆರಿಸಿದರು. ಅವರೆಲ್ಲ ಅತಿ ಎತ್ತರಕ್ಕೆ ಬೆಳೆದರು. ಪರಮಹಂಸರ ಶಿಷ್ಯಸಮುದಾಯದ ಹಿಮಾಲಯದಲ್ಲಿ ಸ್ವಾಮಿ ವಿವೇಕಾನಂದರು ಗೌರೀಶಂಕರ ಶಿಖರವಾಗಿದ್ದಾರೆ.

### ವಿವೇಕಾನಂದರ ಜೀವನಮುಖಗಳು

ಸ್ವಾಮಿ ವಿವೇಕಾನಂದರು ಬದುಕಿದ್ದು ಮೂವತ್ತೊಂಬತ್ತು ವರ್ಷ ಆರು ತಿಂಗಳು ಮಾತ್ರ. (ಜನನ: ೧೨-೧-೧೮೬೩; ಮರಣ: ೪-೭-೧೯೦೨) ಸ್ವಾಮೀಜಿಯ ಸಾಹಸಮಯ ಜೀವನವನ್ನು ಮೂರು ವಿಭಾಗ ಮಾಡಬಹುದು: ವಿದ್ಯಾರ್ಥಿ-ಸಾಧಕ, ಪರಿವ್ರಾಜಕ ಸಂನ್ಯಾಸಿ ಮತ್ತು ವೇದಾಂತ ಪ್ರಚಾರಕ.

ಒಂದು: ವಿದ್ಯಾರ್ಥಿಯಾಗಿದ್ದಾಗ ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ವಜ್ಞಾನವನ್ನೂ ಸಾಹಿತ್ಯವನ್ನೂ ಇಂಗದ ತೃಷೆಯಿಂದ ಓದಿ ಜೀರ್ಣಿಸಿಕೊಂಡಿದ್ದರು, ಗುರುವಿನ ನಿರ್ದೇಶನದಲ್ಲಿ ಸಾಧನೆ ಕೈಗೊಂಡು ಸಾಕ್ಷಾತ್ಕಾರ ಪಡೆದಿದ್ದರು.

ಎರಡು: ತಮ್ಮ ದೇವಗುರುವಿನ ಮಹಾಸಮಾಧಿಯ ನಂತರ ಮಾತೃಭೂಮಿಯನ್ನು ಸುಮಾರು ಆರು ವರ್ಷಗಳ ಕಾಲ ಸತತವಾಗಿ ಸುತ್ತಾಡಿ ಬಂದರು. ತಾಯ್ನಾಡನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರು. ಜನರ ಕಷ್ಟವನ್ನು ಕಿವಿಗೊಟ್ಟು ಕೇಳಿದರು; ದೇಶದ ಹೀನಸ್ಥಿತಿಗೆ